ಸಿವಿಲ್ ಮಿಸ್. ನಂ. 1/2014
ಪಿ. ಡಬ್ಲ್ಯೂ: 1

ಸಾಕ್ಷಿಯನ್ನು ದಿಃ 25-11-2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ 2(ಎ) ಯಿಂದ 2(ಡಿ) ಎದ್ರುದಾರರ ಪರಃ ಶ್ರೀ ವಿ.ಎ.ಟಿ. ವಕೀಲರಿಂದಃ**

ಅರ್ಜಿಯಲ್ಲಿ ಕಾಣಿಸಿದ ಆಸ್ತಿಯಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸ್ಥಿ್ರ ಅರ್ಜಿಯಲ್ಲಿ ಕಾಣಿಸಿದ ಮನೆ ನಂ.1230 ನಾನು ಕಟ್ಟಿಸಿದ್ದಲ್ಲ. ಅದನ್ನು ಕರ್ಕಿ ಕುಟುಂಬದವರು ಕಟ್ಟಿದ್ದರು ಎಂದರೆ ಸರಿ. ಕರ್ಕಿ ಕಟುಂಬದವರು ಮನೆ ಕಟ್ಟಿದ ನಂತರ ಯಾವುದಾದರೂ ಮನೆ ಕಾರ್ಯಕ್ರಮಗಳನ್ನು ಅದೇ ಮನೆಯಲ್ಲಿ ಆಚರಿಸುತ್ತಿದ್ದರು ಎಂದರೆ ಸರಿಯಲ್ಲ. ಸ್ಥಿ್ರ ಆಸ್ತಿ ಕರ್ಕಿ ಕುಟುಂಬದವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಕರ್ಕಿ ಕುಟುಂಬದ ಆಸ್ತಿಯಾದ್ದರಿಂದ ಸ್ಥಿ್ರ ಆಸ್ತಿಯಲ್ಲಿ ಅವರಿಗೆ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಕರ್ಕಿ ಕಟುಂಬಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ನನ್ನ ಅಡ್ಡ ಹೆಳರು ಹೊಳೆಗದ್ದೆ ಎಂದರೆ ಸರಿ. ಕರ್ಕಿ ಕುಟುಂಬಕ್ಕೆ ನಾನು ಸೇರಿಸಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮನೆ 1230 ಕರ್ಕಿ ಕಟುಂಬದವರೇ ನೋಡಿಕೊಳ್ಳುತ್ತಿದ್ದು ಆ ಮನೆಯಲ್ಲಿ ಯಾವತ್ತೂ ನಾನು ಇದ್ದಿದ್ದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮಾನ್ಯ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟಿ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.